**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ**

**ಸಿಸಿ ಸಂಖ್ಯೆ: 3/2019    CW-8    PW-1**

**ಸಾಕ್ಷಿಯನ್ನು ದಿಃ 07.03.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರುಃ ಡಾ. ಎಂ. ಶಿವಕುಮಾರ್**

**ತಂದೆ ಹೆಸರುಃ ಮಾಸಿಲಾ ಮಣಿ**

**ವಯಸ್ಸುಃ 62 ವರ್ಷ**

**ವೃತ್ತಿಃ  ವೈಧ್ಯಾಧಿಕಾರಿಗಳು**

**ವಾಸ ಸ್ಥಳಃ  ಕೆ.ಜಿ.ಎಫ್**

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಕೆ.ಜಿ.ಎಫ್. ಸಾರ್ವಜನಿಕ ಆಸ್ಪತ್ರೆಯಲ್ಲಿ 2004 ರಿಂದ 2022 ರವರೆಗೆ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಸಿರುತ್ತೇನೆ.

ದಿಃ16.04.2018 ರಂದು ರಾತ್ರಿ 10.20 ಗಂಟೆ ಸಮಯದಲ್ಲಿ ಚಾಸಾ 1 ರವರು ಹಲ್ಲೆಯ ಹಿನ್ನೆಲಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು, ಅವರನ್ನು ಪರೀಕ್ಷಿಸಿ ನೋಡಲಾಗಿ,

- ಎಡ ಕಣ್ಣಿನ ಉಬ್ಬಿನ ಬಳಿ ಊತದ ಗಾಯ
- ಬಲ ಹಣೆಯ ಮೇಲೆ ಊತದ ಗಾಯ
- ಎಡ ಹಿಮ್ಮಡಿಯ ಮೇಲೆ ಭಾಗದಲ್ಲಿ ಊತದ ಗಾಯ
- ಎದೆಯ ಭಾಗದಲ್ಲಿ ನೋವು
- ಬೆನ್ನಿನ ಹಿಂಭಾಗದಲ್ಲಿ ತೆರೆಚಿದ ಗಾಯ

- ಸದರಿ ಗಾಯಗಳಿಗೆ ಸೂಕ್ತ ಚಿಕಿತ್ಸೆಯನ್ನು ನೀಡಿರುತ್ತೇನೆ. ಮೇಲ್ಕಂಡ ಗಾಯಗಳಲ್ಲಿ ಒಂದು ಮತ್ತು 4 ರಗಾಯ ತೀವ್ರ ಸ್ವರೂಪದ ಗಾಯಗಳಾಗಿದ್ದು, 2,3 ಮತ್ತು ರ 5 ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ.

**ಈ ಸಂಬಂಧ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆಂದು, ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯ ಮುಂದೆ ಇರುವ ರಾಡ್ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದಲ್ಲಿ ಮೇಲ್ಕಂಡ ಗಾಯಗಳು ಉಂಟಾಗುವ ಸಾಧ್ಯತೆಗಳು ಇರುತ್ತವೆ.**

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಸಿ.ಪಿ.ವಕೀಲರಿಂದಃ

ಚಾಸಾ-1 ರವರು ಆಸ್ಪತ್ರೆಗೆ ದಾಖಲಾದಾಗ ಬಗ್ಗೆ ಪೋಲೀಸರಿಗೆ ಮಾಹಿತಿ ನೀಡಿರುತ್ತೇನೆ. ಈ ಸಂಬಂಧ ರಿಜಿಸ್ಟೆರ್ ನಲ್ಲಿ ನಮೂದು ಮಾಡಿರುತ್ತೇನೆ. ಸದರಿ ರಿಜಿಸ್ಟರ್ ನ್ನು ಈ ದಿನ ತಂದಿರುವುದಿಲ್ಲ. ಈ ಪ್ರಕರಣ ದಾಖಲಾಗಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೋಲೀಸರು ಗಾಯದ ಪ್ರಮಾಣ ಪತ್ರ ಪಡೆಯಲು ನನ್ನ ಬಳಿ ಬಂದು ಚರ್ಚೆ ಮಾಡಿರುತ್ತಾರೆ ಚಾಸಾ-1 ರವರಿಗೆ ಯಾವುದೇ ರೀತಿ ಗಾಯಗಳು ಉಂಟಾಗದಿದ್ದರೂ ನಾನು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ ನ್ಯಾಯಾಲಯ ಮುಂದೆ ಇರುವ ರಾಡ್ ಮತ್ತು ದೊಣ್ಣೆಯನ್ನು ನನಗೆ ಪೋಲೀಸರು ತೋರಿಸಿರುವುದಿಲ್ಲ. ದ್ವಿಚಕ್ರ ವಾಹನದಿಂದ ನಿಯಂತ್ರಣ ತಪ್ಪಿ ಬಿದ್ದಲ್ಲಿ ಮೇಲ್ಕಂಡ ಗಾಯಗಳು ಉಂಟಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

**(ಕೇಶವಮೂರ್ತಿ.ಬಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಂಗಾರಪೇಟೆ